

### ಪೈಠಣಿ ಸೀರೆ ಗುರುತಿಸುವುದು ಹೇಗೆ?

ಪೈಠಣಿ ಸೀರೆಯನ್ನು ರೇಷ್ಮೆ ನೂಲು ಹಾಗೂ ಜರಿಯಿಂದ ತಯಾರಿಸಲಾಗುತ್ತದೆ. ಹಾಗೇ ಎರಡೂ ಬದಿಗಳು ಒಂದೇ ರೀತಿ ಇರುತ್ತವೆ. ಹಾಗಾಗಿ ಈ ಸೀರೆಯನ್ನು ಆರಿಸಿಕೊಳ್ಳುವಾಗ ಈ ಅಂಶವನ್ನು ನೆನೆಪಿನಲ್ಲಿಟ್ಟುಕೊಳ್ಳಿ.

- ನವಿಲು, ಕಮಲ, ಗಿಳಿ, ಹೂವು, ಬಳ್ಳಿ ಇಂತಹ ಮೋಟಿಫ್‌ಗಳನ್ನು ಪೈಠಣಿ ಸೀರೆಯಲ್ಲಿ ಕಾಣಬಹುದು.
- ಕೆಂಪು, ಹಳದಿ, ನೀಲಿ, ನೇರಳೆ, ಪೀಚ್‌, ಗುಲಾಬಿ, ಹಸಿರು, ಕೆನ್ನೇರಳೆ ಬಣ್ಣಗಳಂತಹ ಮೂಲ ಬಣ್ಣಗಳಲ್ಲಿ ಪೈಠಣಿ ಸೀರೆಗಳು ಕಂಡುಬರುತ್ತವೆ. ನೇಕಾರರು ತರಕಾರಿ ಬಣ್ಣಗಳನ್ನು ಬಳಸಿ ಈ ಎಳೆಗಳನ್ನು ಬಣ್ಣ ಮಾಡುತ್ತಾರೆ.
- ಈ ನೇಯ್ಗೆ ಪ್ರಕ್ರಿಯೆಯು ಕೈಯಿಂದ ಮಾಡಲಾಗಿರುವುದರಿಂದ ಎರಡು ಪೈಠಣಿ ಸೀರೆಗಳು ಎಂದಿಗೂ ಒಂದೇ ರೀತಿ ಇರುವುದಿಲ್ಲ. ವಿನ್ಯಾಸದಲ್ಲಿ ಯಾವಾಗಲೂ ಸೂಕ್ಷ್ಮ ವ್ಯತ್ಯಾಸಗಳಿರುತ್ತವೆ.

ಅಂಗವಾಗಿದೆ. ದಕ್ಷಿಣದಲ್ಲಿ ಕಾಂಚಿಪುರಂ ಸೀರೆಗಳಿಗೆ ಮಹತ್ವ ಇರುವ ಹಾಗೇ ಮಹಾರಾಷ್ಟ್ರದಲ್ಲಿ ಈ ಪೈಠಣಿ ಸೀರೆಗಳಿಗೆ ಬೇಡಿಕೆ ಹೆಚ್ಚು. ಹಬ್ಬ ಹರಿದಿನಗಳು, ಶುಭ ಸಮಾರಂಭಗಳು, ಮದುವೆಗಳಿಗೆ ಈ ಸೀರೆ ಬೇಕೇ ಬೇಕು ಎನ್ನುವಷ್ಟು ಅನಿವಾರ್ಯವಾಗಿದೆ. ಇದರ ವಿನ್ಯಾಸ ಕೂಡ ಅಷ್ಟೇ ಸುಂದರವಾಗಿದೆ. ಪೈಠಣಿ ಸೀರೆಯ ನೇಯ್ಗೆ ಕಸೂತಿಯಂತಿದೆ. ಒಂದು ಎಳೆ ಕೂಡ ಹೊರಗೆ ನೇತಾಡುವುದಿಲ್ಲ. ಸೀಲ್ಡ್ ರೀತಿ ಇರುತ್ತದೆ. ಮದುಮಗಳು ಈ ಸೀರೆ ಧರಿಸಿದರೆ ಅವಳ ತೊಟ್ಟ ಒಡವೆಗಳು ಇದಕ್ಕೆ ಸಿಕ್ಕಿ ಹಾಕಿಕೊಳ್ಳುವ ಗೋಜಲು ಇಲ್ಲ. ಹಾಗಾಗಿ ಮಹಾರಾಷ್ಟ್ರದ ವಧುಗಳು ಈ ಫೈಠಣಿ ಸೀರೆಯನ್ನು ಇಷ್ಟಪಡುವುದಕ್ಕೆ ಇದು ಒಂದು ಕಾರಣ.

ಮೂಲ ಪೈಠಣಿ ಸೀರೆ ನೇಯ್ಗೆಯಲ್ಲಿ ಪ್ಯೂರ್ ಸಿಲ್ಕ್ ಬಳಸಲಾಗುತ್ತದೆ. ಪಲ್ಲು ಹಾಗೂ ಬಾರ್ಡರ್‌ಗಳಲ್ಲಿ ಅಲ್ಪಪ್ರಮಾಣದಲ್ಲಿ ಪ್ಯೂರ್ ಗೋಲ್ಡ್ ಹಾಗೂ ಸಿಲ್ವರ್ ಜರಿಗಳನ್ನು ಬಳಸಲಾಗುತ್ತದೆ. ಈ ಸೀರೆ ತಯಾರಿಕೆಯಲ್ಲಿ ಬಳಸುವ ಜರಿಯನ್ನು ಗುಜರಾತ್‌ನ ಸೂರತ್‌ನಿಂದ ವಿಶೇಷವಾಗಿ ಖರೀದಿಸಲಾಗುತ್ತದೆ. ಈ ಸೀರೆಯನ್ನು ತಯಾರಿಸುವ ಪ್ರಕ್ರಿಯೆಯು ಒಂದು ತಿಂಗಳಿನಿಂದ ವರ್ಷಗಳವರೆಗೆ ಅವಧಿಯನ್ನು ತೆಗೆದುಕೊಳ್ಳಬಹುದು. ಈ ಕಾರಣದಿಂದಾಗಿ ಪೈಠಣಿ ಸೀರೆ ಹೆಚ್ಚು ದುಬಾರಿ. ಸೀರೆಗಳ ಬೆಲೆಯನ್ನು ಕಡಿಮೆ ಮಾಡಲು ನೇಕಾರರು ಚಿನ್ನದ ಬದಲು ಬೆಳ್ಳಿ ಮತ್ತು ಬೆಳ್ಳಿಯ ಬದಲಿಗೆ ರೇಷ್ಮೆಯನ್ನು ಬಳಸುವುದೂ ಇದೆ. ಆರು ಹಾಗೂ ಒಂಬತ್ತು ಗಜದ ಪೈಠಣಿ ಸೀರೆಗಳು ಲಭ್ಯವಿದ್ದು, ಇದರ ಇನ್ನೊಂದು ವಿಶೇಷವೆಂದರೆ ಈ ಪೈಠಣಿ ಕೈಮಗ್ಗದ ಸೀರೆಯ ಎರಡೂ ಬದಿಗಳು ನೋಡುವುದಕ್ಕೆ ಒಂದೇ ರೀತಿ ಕಾಣುತ್ತದೆ. ಪಲ್ಲು ಹಾಗೂ ಬಾರ್ಡರ್ ಕೂಡ ಎರಡೂ ಕಡೆ ಒಂದೇ ರೀತಿಯಲ್ಲಿರುತ್ತದೆ. ಪವರ್ ಲೂಮ್ ಪೈಠಣಿ ಸೀರೆಯಲ್ಲಿ ಹಿಂದಿನ ಭಾಗದಲ್ಲಿ ಎಳೆಗಳನ್ನು ಕಾಣಬಹುದು. ಈ ಪೈಠಣಿ ಸೀರೆಗಳು ಕಾಲ ಕಳೆದಂತೆ ತಮ್ಮ ಹೊಳಪನ್ನು ಕೂಡ ಕಳೆದುಕೊಳ್ಳುವುದಿಲ್ಲ ಎನ್ನುತ್ತಾರೆ ಸೀರೆ ತಜ್ಞರು. ಹಾಗಾಗಿ ಈ ಸೀರೆಯೆಂದರೆ ಮಹಾರಾಷ್ಟ್ರದವರಿಗೆ ಅಚ್ಚುಮೆಚ್ಚು.

ಸಾಂಪ್ರದಾಯಿಕವಾಗಿ ಪೈಠಣಿ ಸೀರೆಗಳು ಪ್ಲೈನ್ ಬಾಡಿ, ಹೆವಿ ಗೋಲ್ಡನ್ ಬಾರ್ಡರ್ ಹಾಗೂ ದೊಡ್ಡದಾದ ಪಲ್ಲು ಹೊಂದಿದ್ದು ಕಾಲಾ ನಂತರದಲ್ಲಿ ಈ ಸೀರೆಗಳಲ್ಲಿ ವಿವಿಧ ಮೋಟಿಫ್‌ಗಳನ್ನು ಬಳಸಲಾರಂಭಿಸಲಾಯಿತು. ಈಗಿನ ನೇಕಾರರು ಹೊಸ ಹಾಗೂ ನವೀನ ಮಾದರಿಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸುತ್ತಿದ್ದರೂ ಸಾಮಾನ್ಯವಾಗಿ ಸಾಂಪ್ರದಾಯಿಕ ಮಾದರಿಗಳನ್ನು ಪೈಠಣಿ ಸೀರೆಗಳಲ್ಲಿ ಬಳಸಲಾಗುತ್ತದೆ. ಈ ಸೀರೆಗಳ ಬಾಡಿಯಲ್ಲಿ ಸಾಮಾನ್ಯವಾಗಿ ಬಳಸುವ ಮೋಟಿಫ್‌ಗಳೆಂದರೆ ಕಮಲದ ಹೂ, ಹಂಸ, ನಾಣ್ಯ, ಹೂ ಬಿಡುವ ಬಳ್ಳಿ, ಬಳೆಯಲ್ಲಿ ನವಿಲು, ಹತ್ತಿ ಹೂವು, ವೃತ್ತಗಳು, ನಕ್ಷತ್ರಗಳು ಹಾಗೂ ಎಲೆಗಳ ಸಮೂಹ ಇರುತ್ತದೆ. ಈ ಸೀರೆಯ ಪಲ್ಲುಗಳಲ್ಲಿ ಅಸಾವಾಲಿ, ಪಂಜಾ, ಮುತಾಡ, ನವಿಲು ಇಂತಹ ಮೋಟಿಫ್‌ಗಳು ಸಾಮಾನ್ಯವಾಗಿ ಕಂಡುಬರುತ್ತವೆ. ಪೈಠಣಿ ಸೀರೆಗಳನ್ನು ಹಲವಾರು ಬಣ್ಣಗಳಲ್ಲಿ ನೇಯಲಾಗುತ್ತದೆ. ಈ ಸೀರೆಗಳಲ್ಲಿ ಸಾಮಾನ್ಯವಾಗಿ ಬಳಸುವ ಬಣ್ಣಗಳೆಂದರೆ ಕಪ್ಪು, ತಿಳಿ ಕಪ್ಪು, ಹಳದಿ, ನೀಲಿ, ಹಸಿರು ಹಾಗೂ ಕೆಂಪು, ಗುಲಾಬಿ ಸಂಯೋಜನೆಯದ್ದು, ಹಸಿರು, ಬಿಳಿ ಹಾಗೂ ಕೆಂಪು ಮಿಶ್ರಣ, ಹಸಿರು ಮತ್ತು ಕೆಂಪು ಮಿಶ್ರಣ, ನೇರಳೆ ಮತ್ತು ಕೆಂಪು ಸಂಯೋಜನೆ ಈ ರೀತಿಯ ಬಣ್ಣಗಳನ್ನು ಬಳಸಲಾಗುತ್ತದೆ.

### ಕಾಳಜಿ ಮಾಡುವುದು ಹೇಗೆ?

ಸೀರೆಯನ್ನು ಉಪಯೋಗಿಸಿದ ಬಳಿಕ ಪ್ರತಿ ಸಲ ತೊಳೆಯಬೇಡಿ. ಬಳಸಿದ ಮೇಲೆ ಹೊರಗಡೆ ಗಾಳಿಗೆ ಸ್ವಲ್ಪ ಹೊತ್ತು ಹಾಕಿ. ಹೆಚ್ಚು ಸಮಯದವರೆಗೆ ಸೂರ್ಯನ ಬಿಸಿಲಿನಲ್ಲಿ ಒಣಗಿಸಬೇಡಿ. ಗಾಳಿಗೆ ಹಾಕಿದ ನಂತರ ಇದರ ಮಡಿಕೆಯನ್ನು ಬದಲಾಯಿಸಿ ಮಸ್ಲಿನ್ ಬ್ಯಾಗ್‌ನಲ್ಲಿಡಿ. ಬಳಸದೇ ಇದ್ದಾಗಲೂ ಆಗಾಗ ಹೊರಗಡೆ ಗಾಳಿಗೆ ಹರಡುವುದನ್ನು ಮರೆಯಬೇಡಿ. ■